ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/ವಿಯೋ/01/ಉನ್ನತಿ ಕಾರ್ಯಕ್ರಮ/2018-19

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 28-01-2019.

## ಅಧಿಕೃತ ಜ್ಞಾಪನ

ವಿಷಯ: 2018-19ನೇ ಸಾಲಿನಲ್ಲಿ "ಉನ್ನತಿ" ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ತೃತೀಯ ವರ್ಷದ ವಿದ್ಯಾರ್ಥಿಗಳಿಂದ ಹಿಮ್ಮಾಹಿತಿ ಪಡೆದು, ಕ್ರೋಢೀಕರಿಸಿ ಸಲ್ಲಿಸುವ ಕುರಿತು.

ಉಲ್ಲೇಖ: 1) ಈ ಕಛೇರಿಯ ಸಮ ಸಂಖ್ಯೆ ದಿನಾಂಕ: 14-06-2018ರ ಉನ್ನತಿ ಕಾರ್ಯಕ್ರಮದ ಕುರಿತ ಸುತ್ತೋಲೆ.

2) ಈ ಕಛೇರಿಯ ಸಮ ಸಂಖ್ಯೆ ದಿನಾಂಕ: 26-07-2018ರ ಅಧಿಕೃತ ಜ್ಞಾಪನ.

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖ(1)ಕ್ಕೆ ಸಂಬಂಧಿಸಿದಂತೆ, SGB ಉನ್ನತಿ ಫೌಂಡೇಶನ್ ಸಂಸ್ಥೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ತೃತೀಯ ಪದವಿ ವಿದ್ಯಾರ್ಥಿಗಳಿಗೆ ಅನುಷ್ಠಾನಗೊಳಿಸುತ್ತಿರುವ ಒಟ್ಟು 100 ಗಂಟೆಗಳ ತರಬೇತಿ ಕಾರ್ಯಕ್ರಮದ ಕುರಿತು ಉಲ್ಲೇಖ(2)ರನ್ವಯ ವಿದ್ಯಾರ್ಥಿಗಳಿಂದ ಹಿಮ್ಮಾಹಿತಿ ಪಡೆದು, ಕ್ರೋಢೀಕರಿಸಿ, ಇಲಾಖೆಗೆ ತುರ್ತಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ಆದರೆ ಈ ಕುರಿತು ಇಲ್ಲಿಯವರೆಗೂ ಹಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಹಿಮ್ಮಾಹಿತಿ ಸ್ವೀಕೃತವಾಗಿರುವುದಿಲ್ಲ. ಸದರಿ ಸಂಸ್ಥೆ ಇದೀಗ ಕೆಲವು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ತರಬೇತಿ ನೀಡಲು ಪ್ರಾರಂಭಿಸಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಉನ್ನತಿ ವಿದ್ಯಾರ್ಥಿಗಳಿಂದ ಹಿಮ್ಮಾಹಿತಿಯನ್ನು ಪ್ರಾಂಶುಪಾಲರ ಮತ್ತು ಕಾರ್ಯಕ್ರಮ ಸಮನ್ವಯಾಧಿಕಾರಿಗಳ ದೃಢೀಕರಣದೊಂದಿಗೆ ನಿಗದಿತ ಪಡೆದು, ಕ್ರೋಢೀಕರಿಸಿ, ತಮ್ಮ ಕಛೇರಿಯ ವ್ಯಾಪ್ತಿಗೆ ಬರುವ ಕಾಲೇಜುಗಳ ಕ್ರೋಢೀಕೃತ ಹಿಮ್ಮಾಹಿತಿಯನ್ನು ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳಲ್ಲಿ ಇಲಾಖೆಗೆ ದಿ:05-02-2019ರೊಳಗೆ ಸಲ್ಲಿಸಬೇಕಾಗಿ ಸೂಚಿಸಲಾಗಿದೆ. ಸಾಫ್ಟ್ ಪ್ರತಿ ಕಳುಹಿಸಬೇಕಾದ ಇ-ಮೇಲ್ ವಿಳಾಸ: naipunyanidhi.dce@gmail.com. ಉನ್ನತಿ ಕಾರ್ಯಕ್ರಮದ ಅನುಷ್ಠಾನಕ್ಕೆ ನಿಗದಿಗೊಳಿಸಲಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪಟ್ಟಿಯನ್ನು ಮತ್ತು ನಮೂನೆಯನ್ನು ಲಗತ್ತಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು.

**ಇವರಿಗೆ:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಮತು ಕಲಬುರ್ಗಿ-ಅಗತ್ಯ ಕ್ರಮಕ್ಕಾಗಿ.
2) ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಶಿಇ, ಬೆಂಗಳೂರು – ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು.
2) ಕಛೇರಿ ಪ್ರತಿ.

ಪ್ರ. ಬಾ

# ಹಿಮ್ಮಾಹಿತಿ ನಮೂನೆ

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹೆಸರು:

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ:

| ಉನ್ನತಿ ಕೌಶಲ್ಯ ತರಬೇತಿ ನಿಮ್ಮ ಕಾಲೇಜಿನಲ್ಲಿ ನಡೆಯುತ್ತಿದೆಯೆ? | ತರಬೇತಿ ಪಡೆದಿರುವ ತಂಡಗಳ ಸಂಖ್ಯೆ | ತರಬೇತಿಯಲ್ಲಿ ಭಾಗವಹಿಸಿದ ತಂಡವಾರು ವಿದ್ಯಾರ್ಥಿಗಳ ಸಂಖ್ಯೆ | ತರಬೇತಿಯಲ್ಲಿ ಭಾಗವಹಿಸಿದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ತರಬೇತಿಯ ಕುರಿತು ವಿದ್ಯಾರ್ಥಿಗಳ ಅಭಿಪ್ರಾಯ | ತರಬೇತಿ ಬಹಳ ಉಪಯುಕ್ತ/ ಉಪಯುಕ್ತ/ ಅನುಪಯುಕ್ತ | ತರಬೇತಿಯಲ್ಲಿ ಇರಬಹುದಾದ ತೊಡಕುಗಳು |
|---|---|---|---|---|---|---|
| ಹೌದು/ಇಲ್ಲ | | | | | | |

ವಿದ್ಯಾರ್ಥಿಯ ಸಹಿ

ಪ್ರಾಂಶುಪಾಲರ ಸಹಿ ಮತ್ತು ಮೊಹರು

ಸಮನ್ವಯಾಧಿಕಾರಿಗಳ ಸಹಿ

ಜಂಟಿ ನಿರ್ದೇಶಕರ ದೃಢೀಕರಣ